ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2818/2019

ಚಾಸಾ:2 ಪ್ರಾಸಾ:2

ದಿನಾಂಕ: 12.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಾದ |
| ತಂದೆಯ ಹೆಸರು | : | ಲೇಟ್ ಬೈರ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಹೆಮ್ಮಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

1ನೇ ಆರೋಪಿ ನನ್ನ ಅಳಿಯ, 2ನೇ ಆರೋಪಿ ಆತನ ಅಣ್ಣ, 3ನೇ ಆರೋಪಿ ಆತನ ಅತ್ತಿಗೆ, 4ನೇ ಆರೋಪಿ 1ನೇ ಆರೋಪಿಯ ಭಾವ.

ದಿ: 30-04-2017 ರಂದು ನನ್ನ ಮಗಳು ಪ್ರಾಸಾ1ರವರ ವಿವಾಹವನ್ನು 1ನೇ ಆರೋಪಿಯೊಂದಿಗೆ ಮಾಡಿಸಿದ್ದು, ವಿವಾಹದ ಮಾತುಕತೆಗಾಗಿ 1ನೇ ಆರೋಪಿ ಉಳಿದ ಆರೋಪಿತರೊಂದಿಗೆ ವಿವಾಹದ ಮಾತುಕತೆಗಾಗಿ ಬಂದಿದ್ದು ಆ ವೇಳೆಗೆ 1ನೇ ಆರೋಪಿಗೆ ರೂಪಾಯಿ 2ಲಕ್ಷ ಹಾಗೂ 20 ಪವನ್ ಚಿನ್ನ ನೀಡಬೇಕೆಂದು ಬೇಡಿಕೊಂಡಿರುತ್ತಾರೆ. ನಾವು ಅದಕ್ಕೆ ಒಪ್ಪದೆ ರೂಪಾಯಿ 1 ಲಕ್ಷ ಹಾಗೂ 9 ಪವನ್ ಚಿನ್ನವನ್ನು ಹಾಕಲು ಒಪ್ಪಿ ಕೊಂಡಿದ್ದು, ವಿವಾಹವಾದ ನಂತರ ಪ್ರಾಸಾ-1ರವರನ್ನು 1ನೇ ಆರೋಪಿ ತನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಜೀವನ ನಡೆಸುತ್ತಾ ತನ್ನ ಅಣ್ಣ, ಅತ್ತಿಗೆ ಮತ್ತು ಭಾವನೊಂದಿಗೆ ಸೇರಿಕೊಂಡು ವರದಕ್ಷಿಣೆ ಕಡಿಮೆಯಾಯಿತು ಎಂದು ಹೇಳಿ ಕಿರುಕುಳ ನೀಡಿ ಈ ವಿಚಾರವಾಗಿ ಕರೆ ಮಾಡಿ ಸ್ವಲ್ಪ ದಿನಗಳ ಕಾಲ ಆಕೆಯನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುವಂತೆ ಆತ ಕೇಳಿಕೊಂಡಿದ್ದು ನನ್ನ ಮಗ ಹೋಗಿ ಕರೆದುಕೊಂಡು

ಬಂದಿರುತ್ತಾರೆ. ಎಷ್ಟು ದಿನಗಳಾದರೂ ಆತ ಕರೆದುಕೊಂಡು ಹೋಗದ ಹಿನ್ನೆಲೆ ಅನಂತರ ಆತನಿಗೆ ಕರೆ ಮಾಡಿ ಯಾವುದೇ ಉತ್ತರ ನೀಡದೆ ಇದ್ದಾಗ ನಾವು ಮಹಿಳಾ ಸಾಂತ್ವನ ಕೇಂದ್ರದಲ್ಲಿ ದೂರು ನೀಡಿ ಅನಂತರ ಆಕೆಯನ್ನು ಕರೆದುಕೊಂಡು ಬೆಳಗಾವಿಗೆ ಹೋಗಿರುತ್ತಾರೆ.

ಅಲ್ಲಿ ಸುಮಾರು 3 ತಿಂಗಳು ವಾಸವಿದ್ದು, ಅನಂತರ ಪುನಃ ಗುಲ್ಬಾ ಡಿಯ ತನ್ನಅಣ್ಣನ ಮನೆಯಲ್ಲಿ ಬಿಟ್ಟು ಹೋಗಿರುತ್ತಾರೆ. ಅನಂತರ ಪುನಃ ಬೆಳಗಾವಿಗೆ ಕರೆದುಕೊಂಡು ಹೋಗಿರುತ್ತಾರೆ. ಅನಂತರ ಮಹಿಳಾ ಸಾಂತ್ವನ ಕೇಂದ್ರದಲ್ಲಿ ನಮ್ಮ ಮನೆಗೆ ಬಂದು ಪ್ರಾಸಾ-1ರವರನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಎಷ್ಟು ದಿನಗಳಾದರೂ ಆತ ಬರದ ಕಾರಣ ನಾವು ದೂರು ದಾಖಲಿಸಿರುತ್ತೇವೆ.

1ನೇ ಆರೋಪಿ ಬೇಡಿದ್ದ ವರದಕ್ಷಿಣೆ ಹಣ ಮತ್ತು ಚಿನ್ನವನ್ನು ನೀಡಲು ನಾನು ಸ್ವಸಹಾಯ ಸಂಘದಿಂದ 2 ವರೆ ಲಕ್ಷ, ಬ್ಯಾ ಂಕಿನಿಂದ 1 ಲಕ್ಷ ಹಾಗೂ ಕೈ ಸಾಲ ಮಾಡಿರುತ್ತೇನೆ. ನನ್ನ ಗಂಡು ಮಕ್ಕಳ ಹೆಸರಿನಿಂದ ಸಹ ಸಾಲ ಪಡೆದಿರುತ್ತೇನೆ.

ದೂರು ನೀಡಿದ ಬಳಿಕ ಪ್ರಾಸಾ-1 ಮತ್ತು 1ನೇ ಆರೋಪಿ ವಾಸವಿದ್ದ ಬೆಳಗಾವಿ ಮನೆಗೆ ಪೊಲೀಸರೊಂದಿಗೆ ಹೋಗಿದ್ದು, ಅಲ್ಲಿ ಅವರು ಪಂಚನಾಮೆ ಜರುಗಿಸುವ ವೇಳೆಗೆ ನಾನು, ಚಾಸಾ-4 ಮತ್ತು 7 ರವರು ಹಾಜರು ಇದ್ದು, ಅಲ್ಲಿ ಬರವಣಿಗೆ ಮಾಡಿ ನಕ್ಷೆ ತಯಾರಿಸಿ ಫೋಟೋ ತೆಗೆದಿರುತ್ತಾರೆ. ಸದ್ರಿ ಕ್ರಮವನ್ನು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿ ನಿಪಿ-9 ಮತ್ತು 10 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-11 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದಃ**

ಮದುವೆಯ ಪ್ರಸ್ತಾಪವನ್ನು 4ನೇ ಆರೋಪಿ ತಂದಿರುತ್ತಾರೆ. ಆತ ನನ್ನ ದೂರದ ಸಂಬಂಧಿ. ಸಾಮಾನ್ಯವಾಗಿ ಮದುವೆಯ ಮಾತುಕತೆ ವೇಳೆಗೆ ಹೊಂದಾಣಿಕೆಯಾಗುತ್ತದೆ ಎಂದು ಕಂಡು ಬಂದರೆ ಮದುವೆ ಮಾಡುತ್ತೇವೆ ಎಂದರೆ ಸರಿ. 1ನೇ ಆರೋಪಿಯ ಬಗ್ಗೆ ಸಂಪೂರ್ಣವಾಗಿ ವಿಚಾರಣೆ ಮಾಡಿ

ವಿವಾಹ ಮಾಡಿರುತ್ತೇವೆ ಎಂದರೆ ಸರಿ. ಮೊದಲ ಭೇಟಿಯಲ್ಲಿಯೇ ಮದುವೆ ಪ್ರಸ್ತಾಪ ಮಾಡಿರುತ್ತಾರೆ. ಮದುವೆಗೂ ಒಂದು ವಾರದ ಮೊದಲು ವರದಕ್ಷಿಣೆಯ ಪ್ರಸ್ತಾಪ ಮಾಡಿರುತ್ತಾರೆ. ಮದುವೆಯ ಮಾತುಕತೆಯಾಗಿ 1 ತಿಂಗಳ ನಂತರ ಮದುವೆಯ ದಿನಾಂಕ ಖಾತ್ರಿಯಾಗಿರುತ್ತದೆ. ಹಣದ ಪ್ರಸ್ತಾಪ ಆಗಿ 1 ತಿಂಗಳ ನಂತರ ಮದುವೆಯಾಗಿರುತ್ತದೆ. ಒಂದು ತಿಂಗಳ ಅವಧಿಯಲ್ಲಿ ಮದುವೆ ಪೂರ್ವದಲ್ಲಿ ಹಣ ಕೊಡಬೇಕೆಂಬ ಬಗ್ಗೆ ಹಾಗೂ ಮದುವೆ ಮಾಡಬೇಕೆಂದು ಯೋಚಿಸುವ ಕಾಲವಕಾಶ ಇತ್ತು ಎಂದರೆ ಸರಿ.

ನಾವು ಹಾಕಿದ ಚಿನ್ನ ಪ್ರಾಸಾ-1 ರವರಿಗೆ ಎಂದರೆ ಸರಿ. ಆರೋಪಿತರ ಕಡೆಯಿಂದ ಪ್ರಾಸಾ-1ರವರಿಗೆ ಕರಿಮಣಿ ಮತ್ತು ಉಂಗುರ ನೀಡಿರುತ್ತಾರೆ. ಮದುವೆಯ ಖರ್ಚನ್ನು ಎರಡೂ ಪಕ್ಷದವರು ಭರಿಸಿರುತ್ತೇವೆ. ಈ ವಿಚಾರವಾಗಿ ನಾನು ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿ. ಆ ರೀತಿ ಸಾಲ ಪಡೆದ ದಾಖಲಾತಿಗಳನ್ನು ಪೊಲೀಸರಿಗೆ ಹಾಜರುಪಡಿಸಿಲ್ಲ. ಪ್ರಾಸಾ-1 ರವರು 2 ಬಾರಿ ಬೆಳಗಾವಿಗೆ ಹೋಗಿದ್ದು ಅಂದಾಜು 2 ತಿಂಗಳು ಒಟ್ಟಾಗಿ ಇರಬಹುದು. ನಾನು ಆ ಸಮಯದಲ್ಲಿ ಬೆಳಗಾವಿಗೆ ಹೋಗಿಲ್ಲ. ಅಲ್ಲಿನ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳಿದಿಲ್ಲ. ಮದುವೆಯಾದ ನಂತರ 1ನೇ ಆರೋಪಿ 2-3 ಬಾರಿ ನಮ್ಮ ಮನೆಗೆ ಬಂದಿರುತ್ತಾರೆ.

1ನೇ ಆರೋಪಿಯ ಮೂಲ ಮನೆ ಸೌಕೂರಿನಲ್ಲಿರುತ್ತದೆ. ಅದು ನಮ್ಮ ಮನೆಯಿಂದ ದೂರವಿಲ್ಲ, ಸುಮಾರು 20 ಕಿ.ಮೀ ವ್ಯಾಪ್ತಿಯಲ್ಲಿ ಇರುತ್ತದೆ. ನಾನು ದಲಿತ ಸಂಘರ್ಷ ಸಮಿತಿಯಲ್ಲಿ ಇದ್ದೆ ಎಂದರೆ ಸರಿ. ಹಲವಾರು ವರ್ಷಗಳಿಂದ ಸಭೆಯಲ್ಲಿ ಭಾಗವಹಿಸಿದ್ದೆ ಎಂದರೆ ಸರಿ. ಹಲವಾರು ಬಾರಿ ಗಲಾಟೆಯಾಗಿದ್ದರೂ ಹಲ್ಲೆ ಮಾಡಿರುವುದಿಲ್ಲ. ಹಲವು ಬಾರಿ ಮನಸ್ತಾಪದಿಂದ ಪ್ರಾಸಾ-1ರವರು ಮನೆಗೆ ಬಂದಿರುತ್ತಾರೆ ಎಂದು ನಾನು ಪೊಲೀಸರಿಗೆ ಹೇಳಿರುತ್ತೇನೆ. ಬೆಳಗಾವಿಯಲ್ಲಿ ಏನು ನಡೆದಿದೆ ಎಂದು ಪ್ರಾಸಾ-1ರವರು ಹೇಳಿದ ಮೇರೆಗೆ ನನಗೆ ವಿಚಾರ ತಿಳಿದು ಬಂದಿರುತ್ತದೆ. ಸೌಕೂರಿನಲ್ಲಿ ನಡೆದ ವಿಚಾರ ಆಕೆ ಹೇಳಿದ ನಂತರ ನನಗೆ ತಿಳಿದು ಬಂದಿರುತ್ತದೆ.

ಇಬ್ಬರೂ ಒಟ್ಟಾಗಿ 1 ವರ್ಷ ಜೀವನ ನಡೆಸಿರಬಹುದು. ಆ ಮಧ್ಯ ಯಾವುದೇ ಪೊಲೀಸ್ ದೂರನ್ನು ನಾವು ದಾಖಲಿಸಿಲ್ಲ. ಹಲ್ಲೆಯಾದ ಬಗ್ಗೆ ಪ್ರಾಸಾ-1ರವರ ಮೇಲೆ ಯಾವುದೇ ಕುರುಹುಗಳನ್ನು

ನಾನು ನೋಡಿಲ್ಲ. ಪ್ರಾಸಾ-1 ರವರು ವಿವಾಹ ವಿಚ್ಛೇಧನವಾಗಿರುತ್ತದೆ. ಆ ವೇಳೆಗೆ ಈ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಪ್ರಕರಣ ದಾಖಲಾಗಿ ಸುಮಾರು 2 ವರ್ಷಗಳ ನಂತರ ವಿವಾಹ ವಿಚ್ಛೇಧನ ಪಡೆದಿರುತ್ತಾರೆ. ವಿವಾಹ ವಿಚ್ಛೇಧನಕ್ಕಾಗಿ ಆರ್ ಕೆ ಎಂ ವಕೀಲರು ವಕಾಲತ್ತು ವಹಿಸಿರುತ್ತಾರೆ. ದಿಃ 15-12-2023 ರಂದು ವಿವಾಹ ವಿಚ್ಛೇಧನದ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿವಾಹ ವಿಚ್ಛೇಧನ ಪಡೆಯುವ ವೇಳೆಗೆ ಪ್ರಾಸಾ-1ರವರಿಗೆ ಯಾವುದೇ ಒತ್ತಡ ಇರಲಿಲ್ಲ. ವಿವಾಹ ವಿಚ್ಛೇಧನಕ್ಕಾಗಿ ನಾವೇ ಮುಂದೆ ಹೋಗಿರುತ್ತೇವೆ. ಆಕೆ ವಿಚ್ಛೇಧನದ ಅರ್ಜಿಯಲ್ಲಿ ಬರೆದುಕೊಟ್ಟ ಎಲ್ಲಾ ವಿಚಾರಗಳನ್ನು ಸ್ವಯಂ ಪ್ರೇರಿತವಾಗಿ ಯಾವುದೇ ಒತ್ತಡವಿಲ್ಲದೆ ಬರೆದಿರುತ್ತಾರೆ ಎಂದರೆ ಸರಿ.

ಪ್ರಾಸಾ-1ರವರು 1ನೇ ಆರೋಪಿ ಹಾಕಿದ್ದ ಕರಿಮಣಿಯನ್ನು ಕೊನೆಯ ಹಂತದಲ್ಲಿ ಮಾರಾಟ ಮಾಡಿರುತ್ತಾರೆ. ಚಾಸಾ-3 ರವರು ಬೆಳಗಾವಿಗೆ ಒಂದು ಬಾರಿಯೂ ಹೋಗಿಲ್ಲ. ಸೌಕೂರಿಗೆ 2 ಬಾರಿ ಹೋಗಿರಬಹುದು. ಯಾವಾಗ ಎಂದು ನೆನಪಿಲ್ಲ. ನನ್ನ ಹೇಳಿಕೆಯನ್ನು ಕೇಳಿ ಬರೆದುಕೊಂಡಿರುತ್ತಾರೆ. ನಾನು ಅದನ್ನು ಓದಿ ನೋಡಿಲ್ಲ.

ನಮ್ಮ ಮನೆಯ ಸುತ್ತಮುತ್ತಲೂ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಎದುರಿಗೆ ಕೊಲ್ಲೂರಿನ ರಾಜ್ಯ ಹೆದ್ದಾರಿ ಇದೆ. 1ನೇ ಆರೋಪಿಯ ಸೌಕೂರಿನ ಮನೆಯ ಅಕ್ಕಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿ. ಆತ ಬೆಳಗಾವಿಯಲ್ಲಿ ಇರುವುದಾಗಿ ತಿಳಿಸಿದ್ದು ನಾವು ಹೋಗಿ ನೋಡಿದಾಗ ಆತ ಅಲ್ಲಿ ಇರಲಿಲ್ಲ. ಪಂಚಾಯಿತಿಯಲ್ಲಿ ನಾವೆಲ್ಲಾ ಕುಳಿತು ಮಾತನಾಡಿರುತ್ತೇವೆ. ಹೊಂದಾಣಿಕೆಯ ಕೊರತೆ ಇದೆ ಎಂದು ಸಾಂತ್ವನ ಕೇಂದ್ರ ದಲ್ಲಿ ದೂರು ನೀಡಿರುತ್ತೇವೆ ಎಂದರೆ ಸರಿ. ಅದಾಗಿ 2 ವರ್ಷಗಳ ನಂತರ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ.

ಹೊಂದಾಣಿಕೆ ಇಲ್ಲದ ಕಾರಣ ಪ್ರಾಸಾ-1ರವರು ಈ ಪ್ರಕರಣವನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಮದುವೆ ಖರ್ಚಿಗಾಗಿ ಹೊಂದಿಸಿದ ಹಣವನ್ನು ವರದಕ್ಷಿಣೆಗಾಗಿ ಮಾಡಿದ ಸಾಲವೆಂದು ಬಿಂಬಿಸಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕೃತ್ಯವನ್ನು ಆರೋಪಿತರು ಎಸಗಿಲ್ಲ ಎಂದರೆ

ಸರಿಯಲ್ಲ. ಪ್ರಾಸಾ-1ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-9 ಮತ್ತು 10ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅಪಾದಿಸಿರುವ ಯಾವುದೇ ಕೃತ್ಯವನ್ನು ಎಸಗಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆ ಬೇಡಿಕೆ ಇಟ್ಟು ಅದನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**